**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ**

**ಸಿಸಿ ನಂ.3073/2023**

ಪಿರ್ಯಾದುದಾರರುಃ ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರುಃ 1. ಪ್ರತಾಪ ಮಾರುತಿ ಅಜ್ಜನವರ್
ವಯಾಃ 35 ವರ್ಷ
ಸಾಃ ಬೆಳಗಾವಿ

**–ಃ ಆಪಾದನೆ ಃ–**

ದಿಃ 04.03.2024 ರಂದು 22.30 ಗಂಟೆಯ ಸುಮಾರಿಗೆ ಧಾರವಾಡ ಗ್ರಾಮೀಣ ಪೋಲೀಸ ಠಾಣೆ ಸರ ಹದ್ದಿಯ ಧಾರವಾಡ ಸವದತ್ತಿ ರಸ್ತೆಯ ಮೇಲೆ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕಾರ ನಂ.ಕೆಎ.24/ಎಂ–9188 ನೇದ್ದನ್ನು ಧಾರವಾಡ ಕಡೆಯಿಂದ ಸವದತ್ತಿ ಕಡೆಗೆ ಅತೀ ವೇಗ ಹಾಗೂ ನಿಕ್ಷಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಕಾರಿನ ಮೇಲೆ ನಿಯಂತ್ರಣ ಕಳೆದುಕೊಂಡು ಅದೇ ಮಾರ್ಗವಾಗಿ ನಿಮ್ಮ ಮುಂದೆ ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ಹೋಗುತ್ತಿದ್ದ ಟ್ರಾಕ್ಟರ ನಂ.ಕೆಎ.17/ಟಿ–8333 ನೇದ್ದರ ಹಿಂದುಗಡೆ ಡಿಕ್ಕಿ ಮಾಡಿ ಅಪಘಾತಮಾಡಿದ್ದು **ಭಾರತೀಯ ದಂಡ ಸಂಹಿತೆ ಕಲಂ.279** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಎರಡನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಟ್ರಾಕ್ಟರನಲ್ಲಿದ್ದ ಚಾಸಾ6 ರವರಿಗೆ ಸಾದಾ ಸ್ವರೂಪದ ಗಾಯ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ.337** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ಮೂರನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಟ್ರಾಕ್ಟರನಲ್ಲಿದ್ದ ಚಾಸಾ7,12

ರವರಿಗೆ ಭಾರಿ ಸ್ವರೂಪದ ಗಾಯ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ.338** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ಕೊನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ನಿಮ್ಮ ಕಾರಿನಲ್ಲಿದ್ದ ಸುಮಂತ ಕರಡಿಗುಡ್ಡ ರವರಿಗೆ ಭಾರಿ ಪ್ರಮಾಣದ ಗಾಯಪಡಿಸಿ ಮೃತ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ. 304 ಎ** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೇಃ– ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ–

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

( **ಸದರಿ ಆಪಾದನೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.**)

ದಿನಾಂಕ 15.07.2025.

ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ